01-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**

**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 1

## S.S.L.C. MODEL QUESTION PAPER - 1 : 2025 - 26

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

**ವಿಷಯ ಸಂಕೇತ : 01-K** | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 100 ] | [ Max. Marks : 100

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 X 1 = 6**

1. ವರ್ಗೀಯ ವ್ಯಂಜನದ ಪಂಚಮಾಕ್ಷರಗಳಿವು

   (ಎ) ಅನುನಾಸಿಕಗಳು

   (ಬಿ) ಮಹಾಪ್ರಾಣಾಕ್ಷರಗಳು

   (ಸಿ) ಅಲ್ಪಪ್ರಾಣಾಕ್ಷರಗಳು

   (ಡಿ) ಯೋಗವಾಹಗಳು

2. 'ಮಾತಂತು' ಪದವು ಈ ಸಂಧಿಗೆ ಸೇರಿದೆ

   (ಎ) ಆಗಮ

   (ಬಿ) ಯಣ್

   (ಸಿ) ವೃದ್ಧಿ

   (ಡಿ) ಲೋಪ

3. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ

   (ಎ) ಸಂಯುಕ್ತವಾಕ್ಯ

   (ಬಿ) ಸಂಯೋಜಿತವಾಕ್ಯ

   (ಸಿ) ಸಾಮಾನ್ಯವಾಕ್ಯ

   (ಡಿ) ಮಿಶ್ರವಾಕ್ಯ

4. ಕ್ರಿಯಾಪದದ ಮೂಲರೂಪ

   (ಎ) ಸರ್ವನಾಮ

   (ಬಿ) ಧಾತು

   (ಸಿ) ನಾಮಪದ

   (ಡಿ) ನಾಮಪ್ರಕೃತಿ

5. 'ಲೋಕದೊಳ್' ಎಂಬ ಪದದಲ್ಲಿರುವ ವಿಭಕ್ತಿ

   (ಎ) ಪ್ರಥಮಾ

   (ಬಿ) ತೃತೀಯಾ

   (ಸಿ) ಸಪ್ತಮೀ

   (ಡಿ) ದ್ವಿತೀಯಾ

6. 'ಮುಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

   (ಎ) ಕ್ರಿಯಾ

   (ಬಿ) ತತ್ಪುರುಷ

   (ಸಿ) ದ್ವಿಗು

   (ಡಿ) ಅಂಶಿ

**II.** **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

7. ವೀರ : ಬೀರ : : ಕೊಡಲಿ : ..................... .
8. ನದಿ : ರೂಢನಾಮ : : ವಿಜ್ಞಾನಿ : ..................... .
9. ಬನ್ನಿಬನ್ನಿ : ದ್ವಿರುಕ್ತಿ : : ಹಾಲುಜೇನು : ..................... .
10. ನೋಟ : ಕೃದಂತ ಭಾವನಾಮ : : ಪೆರ್ಮೆ : ..................... .

**III.** **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 X 1 = 7**

11. ಭಾಷೆ ಯಾವುದಕ್ಕೆ ಸಾಧನವಾಗಿದೆ?
12. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು?
13. ಲೇಖಕರು ವರ್ಣಿಸಿದ ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?
14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?
15. ಹಲಗಲಿಯ ಗುರುತು ಉಳಿಯದಂತಾದದು ಏಕೆ?
16. ಕುಂಭಸಂಭವ ಎಂದು ಯಾರನ್ನು ಕರೆಯಲಾಗಿದೆ?
17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**IV.** **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 X 2 = 20**

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯರೂಪಕ್ಕೆ ಬಂದ ನೀರಾವರಿ ಯೋಜನೆಗಳಾವುವು?
20. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?
22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
23. ಹಲಗಲಿಗೆ ದಂಡು ಬರಲು ಕಾರಣವೇನು?
24. ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಲು ಕಾರಣವೇನು?
25. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಹೇಗೆ ಸ್ಥಿರವಾಗುವುದು?
26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?
27. ಪೈಗಳ ತಮ್ಮನ ನೂಲುಮದುವೆಯ ಸಿದ್ಧತೆ ಹೇಗೆ ನಡೆಯುತ್ತಿತ್ತು?

**V.** **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 X 3 = 6**

28. ದೇವನೂರ ಮಹಾದೇವ
29. ಪಂಪ

**VI.** **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 X 3 = 3**

30. ಎನಗೆ ಮನಮಿಂದು ಶೂನ್ಯಂ

ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ

**VII.** **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 X 3 = 3**

31. "ಮಾರಿಗೌತಣವಾಯ್ತು ನಾಳಿನ ಭಾರತವು"

**VIII.** **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1 X 3 = 3**

32. ಕೈ ಕೆಸರಾದರೆ ಬಾಯಿ ಮೊಸರು.

**ಅಥವಾ**

ಮನಸ್ಸಿದ್ದರೆ ಮಾರ್ಗ.

**IX.** **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** **6 X 3 = 18**

33. "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ."
34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."
35. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"
36. "ತೇಲಿಸಿ ಮುಳುಗಿಸಿ ಖಂಡಖಂಡಗಳ"
37. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ"
38. "ಹಕ್ಕಿಯ ಕೊರಲಿಂಪು ಹಸುರು!"

**X.** **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 X 4 = 4**

39. ಕಲುಷಿತವಾದೀ ......................................................

..........................................................................

..........................................................................

.................................................................. ಮುಟ್ಟೋಣ

**ಅಥವಾ**

ಮತಗಳೆಲ್ಲವೂ ..........................................................

..........................................................................

..........................................................................

................................................................ ಬಿತ್ತೋಣ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4**

40. ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.

**ಅಥವಾ**

ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನಲ್ಲಿದ್ದ ಕ್ಷಾತ್ರಗುಣ ವೀರಲವ ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)**

43. ನಮ್ಮಲ್ಲಿ ಎಷ್ಟೋ ಮಂದಿ ಸಜ್ಜನರಾಗಿರುವುದು ಸಮಾಜದ ಕಟುಟೀಕೆ ಮತ್ತು ಅಪವಾದಗಳ ಭಯದಿಂದ, ಆರಕ್ಷಕರ ಏಟಿನ ಭಯದಿಂದ. ಇವೆರಡೂ ಇಲ್ಲದಲ್ಲಿ ಅವರ ಸೌಜನ್ಯ ಮಾಯವಾಗಿ ಬಿಡುವುದು. ಆ ಸೌಜನ್ಯ ಮಾಯವಾಗದೆ ಉಳಿಯುವ ಜನರ ಸಂಖ್ಯೆ ಕೈಬೆರಳೆಣಿಕೆಯಷ್ಟಿರಬಹುದು. ಮನೋವಿಕಾರಗಳಿಗೆ ಕಾರಣವಾಗುವಂಥ ವಾತಾವರಣವಿದ್ದರೂ ನಿಜವಾದ ಧೀರರ, ಸಂಯಮಿಗಳ ಮನಸ್ಸು ವಿಕಾರ ಹೊಂದುವುದಿಲ್ಲ. ಹಾಗೆ ವಿಕಾರವಾಗದೆ ಉಳಿಯುವಂತೆ ಅವರಿಗೆ ಪ್ರೇರಕವಾದ ಶಕ್ತಿಯೇ ಧರ್ಮ. ದೇವರುಗಳಲ್ಲಿ ನೀತಿ ನಿಯಮಗಳಲ್ಲಿ ಅವರ ಅಪಾರ ವಿಶ್ವಾಸ ಮತ್ತು ಸದಾಚಾರ ನಿಷ್ಠೆ. ನಿಜವಾದ ಧರ್ಮ ಎರಡು ಕೆಲಸಗಳನ್ನು ಮಾಡಿಕೊಡುತ್ತದೆ. ಒಂದು ಮನುಷ್ಯನ ಮನಸ್ಸಿನ ಪುನಾರಚನೆ–ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಅದರ ಗತಿ, ವೇಗಗಳನ್ನು ಉದಾತ್ತ ಗುರಿಯೆಡೆಗೆ ತಿರುಗಿಸುತ್ತದೆ. ಇನ್ನೊಂದು, ಸಮಾಜದ ವಿವಿಧ ವ್ಯಕ್ತಿಗಳೊಳಗೆ ಬಾಂಧವ್ಯ ಮತ್ತು ಸಹಕಾರದ ಬಾಳ್ವೆಗೆ ತಕ್ಕ ವ್ಯವಸ್ಥೆ ಮಾಡುತ್ತದೆ. ಇತರರ ಸುಖ ಮತ್ತು ಆಧ್ಯಾತ್ಮಿಕ ಉನ್ನತಿಗೆ ತಡೆಯಾಗದಂತೆ ತನ್ನ ಸ್ವಾರ್ಥವನ್ನು ನಿಯಂತ್ರಿಸಿಕೊಳ್ಳುವ ನಡತೆ ಅದು. ಅರ್ಥಕಾಮಗಳೇ ಮುಖ್ಯವಲ್ಲ. ಏಕೆಂದರೆ ಮನುಷ್ಯನು ಬರಿಯ ದೇಹವೇ ಅಲ್ಲ. ಅವನು ಜೀವಾತ್ಮ. ದೇಹ, ಇಂದ್ರೀಯ, ಮನಸ್ಸು–ಇವುಗಳನ್ನು ಬಳಸಿ ಬಾಳುವೆಯನ್ನನುಭವಿಸುತ್ತಿರುವ ಒಂದು ತತ್ತ್ವವಿದೆ. "ನಾನು", ನಾನು

[ Turn over

ಎಂದುಕೊಳ್ಳುತ್ತದೆಯಲ್ಲ–ಅದೇ ಆ ತತ್ತ್ವ. ನಾನು ಎಂಬುದು ದೇಹಕ್ಕಿಂತ ಹೆಚ್ಚಾಗಿ ಆತ್ಮವಾದ ಕಾರಣ ದೇಹದ ಸುಖವನ್ನು ಮಾತ್ರ ಎಣಿಸಿದರಾಗದು. ತನ್ನ ಎಲ್ಲ ಸಂಪತ್ತನ್ನೂ ಆತ್ಮದ ಕ್ಷೇಮಕ್ಕೆ ವಿರೋಧವಾಗದಂತೆ ಉಪಯೋಗಿಸಬೇಕು. ಅಂದರೆ ಇಂದ್ರೀಯ ಸುಖದ ದಾಸನಾಗಬಾರದು. ಅವುಗಳು ಎಳೆದಲ್ಲಿಗೆ ಹೋಗಬಾರದು. ಅವುಗಳ ಯಜಮಾನ "ನಾನು" ಎಂಬುದನ್ನು ಮರೆಯಬಾರದು. ಇಂದ್ರೀಯ ನಿಗ್ರಹ, ಚಿತ್ತಶುದ್ಧಿ, ತನ್ಮೂಲಕ ಆತ್ಮಜ್ಞಾನ, ತತ್ಫಲವಾಗಿ ಸರ್ವಬಂಧ ಸರ್ವದುಃಖ ನಿವೃತ್ತಿ, ಶಾಶ್ವತ ಆನಂದಪ್ರಾಪ್ತಿ, ಇವು ಧರ್ಮಗ್ರಂಥಗಳೂ, ಅನುಭವಿಗಳೂ ಸಾರುವ ಮುಖ್ಯ ಬೋಧನೆಗಳು. ಆದುದರಿಂದ ಧರ್ಮನಿಯಮಗಳನ್ನು ಪಾಲಿಸಿದರೆ, ಅಂದರೆ ಧರ್ಮವನ್ನು ರಕ್ಷಿಸಿದರೆ, ದಿವ್ಯವಾದುದನ್ನು ಪಡೆಯುವ ಪಥದಲ್ಲಿ ಅದು ನಮ್ಮನ್ನು ರಕ್ಷಿಸುತ್ತದೆ; ಗುರಿ ಮುಟ್ಟಿಸುತ್ತದೆ. ಈ ಗುರಿ, ದಿವ್ಯವಾದ ಗುರಿಯಲ್ಲಿನ ವಿಶ್ವಾಸ, ಅದನ್ನು ಹೊಂದಲು ಮಾಡುವ ಪ್ರಾಮಾಣಿಕ ಪ್ರಯತ್ನದಿಂದ ನಮ್ಮ ಬದುಕಿನ ದಿಕ್ಕೇ ಬದಲಿಸುವುದು. ಸ್ವಲ್ಪ ತಡವಾದರೂ, ದೀರ್ಘಕಾಲದ ಪರಿಶ್ರಮ ಬೇಕಾದರೂ ಈ ಪಥದಲ್ಲಿ ಮುನ್ನಡೆಯುವ ಪ್ರತಿಯೊಬ್ಬನ ಪಾಲಿಗೂ ದಿವ್ಯ ಆನಂದ, ಶಾಂತಿ, ಸಂತೃಪ್ತಿಗಳು ಸಿಕ್ಕಿಯೇ ಸಿಕ್ಕುವುವು. ಇದು ಸ್ಥಾಯೀ ವಿಶ್ರಾಮ ಭಾವನೆಯ ಪಥ. ಈ ಗುರಿಯ ಪ್ರಜ್ಞೆ ಇಲ್ಲದ ವ್ಯಕ್ತಿಯ ಸುಖದ ಕಲ್ಪನೆ ಅಥವಾ ಸುಖದ ಅನುಭವ ಒಂದು ರೀತಿಯ ಮೈಮರೆತ. ಅಷ್ಟೇ ಅಲ್ಲ ದುಃಖ ಹಾಗೂ ಗೊಂದಲಕ್ಕೆ ಕಾರಣ.

**ಪ್ರಶ್ನೆಗಳು :**

ಅ) ಧರ್ಮದ ರಕ್ಷಣೆಯಿಂದ ಸಿಗುವ ಲಾಭಗಳನ್ನು ತಿಳಿಸಿ.

ಆ) ನಿಜವಾದ ಧರ್ಮದ ಕೆಲಸಗಳಾವುವು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5**

44. ನಿಮ್ಮನ್ನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗುಡ್ಡೇತೋಟ ಗ್ರಾಮದ ನಿವಾಸಿ 'ಅನ್ನಪೂರ್ಣ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಆರಂಭಿಸುವಂತೆ ಕೋರಿ, ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮೋಹನ' ಎಂದು ಭಾವಿಸಿಕೊಂಡು, 'ಪಾಲಕರ ಸಭೆ'ಗೆ ಆಹ್ವಾನಿಸಿ, ಶಿವಮೊಗ್ಗದಲ್ಲಿ ವಾಸವಾಗಿರುವ 'ಶಾರದಾ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ರಾಷ್ಟ್ರೀಯ ಹಬ್ಬಗಳ ಮಹತ್ತ್ವ

**ಅಥವಾ**

ಕನ್ನಡ ಭಾಷೆಯ ಬೆಳವಣಿಗೆ ಮತ್ತು ಸವಾಲುಗಳು.